ಡಿ-330 (12)

## ಕರ್ನಾಟಕ ವಿಧಾನ ಪರಿಷತ್ತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ, ವಿಧಾನ ಪರಿಷತ್ತು ಸದಸ್ಯರು, ನಿಯಮ 330 ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ**

**ವಿಷಯ** :-

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಈ ಸಂಸ್ಥೆಯ ನಿರ್ದೇಶಕರನ್ನು ಸತತವಾಗಿ ಕಳೆದ 9 ವರ್ಷಗಳಿಂದ ಕೆ.ಸಿ.ಎಸ್.ಆರ್ ಅನ್ಯ ಇಲಾಖೆ ಪ್ರತಿನಿಯೋಜನೆ ನಿಯಮಗಳಿಗೆ ವಿರುದ್ದವಾಗಿ ಮುಂದುವರೆಸಿಕೊಂಡು ಬರಲಾಗಿದೆ. ಹಲವಾರು ಆರೋಪಗಳಿಗೆ ಗುರಿಯಾಗಿರುವ ಸದರಿಯವರನ್ನು ನಿಯಮಗಳಿಗೆ ವಿರುದ್ದವಾಗಿ ಮುಂದುವರೆಸಿಕೊಂಡು ಬಂದಿರುವುದರಿಂದ ಸಂಸ್ಥೆಯ ಗುಣಮಟ್ಟ ಕುಂಠಿತವಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸಳೆಯ ಬಯಸುತ್ತೇನೆ.

**ಉತ್ತರ** :-

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಈ ಸಂಸ್ಥೆಗೆ ಸಂಬಂಧಿಸಿದಂತೆ ದಿನಾಂಕ:23.03.2019ರಿಂದ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದಿರುತ್ತದೆ. ಸದರಿ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ರಾಜ್ಯದ ಮಾನ್ಯತೆ ಪಡೆದಿರುವ ಯಾವುದೇ ವಿಶ್ವವಿದ್ಯಾಲಯದ ಮಾನವಶಾಸ್ತ್ರ ಪ್ರಾಧ್ಯಾಪಕರನ್ನು ನಿಯೋಜನೆ ಮೇರೆಗೆ ಭರ್ತಿಮಾಡಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕರ ಹುದ್ದೆಯಲ್ಲಿ ಡಾ: ಟಿ.ಟಿ.ಬಸವನಗೌಡ ರವರು ಪ್ರಸ್ತುತ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಮೂಲತ: ಧಾರವಾಡ ವಿಶ್ವವಿದ್ಯಾನಿಲಯದ ಮಾನವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿರುತ್ತಾರೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 50ರನ್ವಯ ಯಾವುದೇ ಅಧಿಕಾರಿ/ನೌಕರರನ್ನು ಅವರ ಸಮನಾಂತರ ಹುದ್ದೆಯಲ್ಲಿ ಬೇರೆ ಇಲಾಖೆಗೆ ನಿಯೋಜಿಸಲು ಆಸ್ಪದ ಕಲ್ಪಿಸಲಾಗಿದ್ದು, 5 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ವಿಶೇಷ ಆದೇಶದ ಮೇರೆಗೆ ನಿಯೋಜನೆ ಮಾಡಬಹುದಾಗಿದ್ದು, ಇವರ ವಿರುದ್ದ ಯಾವುದೇ ಗಂಭೀರ ಆರೋಪಗಳು ಸರ್ಕಾರದಲ್ಲಿ ಸ್ವೀಕೃತವಾಗಿಲ್ಲದಿರುವುದರಿಂದ ಮತ್ತು ಇವರು ಉತ್ತಮ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಡಾ: ಟಿ.ಟಿ.ಬಸವನಗೌಡ ಇವರನ್ನು ವಿಶೇಷ ಆದೇಶದ ಮೇರೆಗೆ ಸದರಿ ಸಂಸ್ಥೆಯ ನಿರ್ದೇಶಕರ ಹುದ್ದೆಯಲ್ಲಿ ನಿಯಮಾನುಸಾರ ಮುಂದುವರೆಸಲಾಗಿದೆ.

ಸಕಇ 280 ಎಸ್‌ಟಿಪಿ 2020

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು